**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.31/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ರಾಜೇಂದ್ರ ವರಾದ | ಸಿಡಬ್ಲ್ಯೂ | 2 |
| ತಂದೆ ಹೆಸರು | ಶಂಭುಲಿಂಗ | ಪಿಡಬ್ಲ್ಯೂ | 4 |
| ವಯಸ್ಸು | 33 ವರ್ಷ | | |
| ಉದ್ಯೋಗ | ಖಾಸಗಿ ಉದ್ಯೋಗಿ | | |
| ವಾಸಸ್ಥಳ | ಚಿಕ್ಕಅಣಜಿ ತಾಃ ಬ್ಯಾಡಗಿ | | |

**ದಿಃ 06.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ–1,3 ಮತ್ತು 4 ಇವರ ಪರಿಚಯ ಇರುತ್ತದೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದರಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ, ಸದರಿ ದಾಖಲಾತಿಯನ್ನು ಈಗಾಗಲೇ ನಿ.ಪಿ–3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ–3(ಬಿ) ಎಂದು ಗುರುತಿಸಲಾಯಿತು. ನಿ.ಪಿ–3 ಘಟನಾ ಸ್ಥಳದ ಪಂಚನಾಮೆಗೆ ದಿನಾಂಕಃ 03.08.2019 ರಂದು ನಮ್ಮ ಕಛೇರಿಯಲ್ಲಿರುವ ಸ್ಥಳವಾದ ಹಾವೇರಿ ದಾನೇಶ್ವರಿ ನಗರದ 4 ನೇ ಕ್ರಾಸ ಬಳಿ ಮಾಡಿದ್ದೇನೆ.

2) ದಿನಾಂಕಃ 03.08.2019 ನೇ ಇಸ್ವಿಯಂದು ಪೊಲೀಸರು ಚಾ.ಸಾ–1 ಮುದ್ದನಗೌಡ ಈತನ ಬೈಕ ಕಳ್ಳತನವಾದ ನಮ್ಮ ಕಛೇರಿಯ ಮುಂದೆ ಪಂಚನಾಮೆ ಮಾಡಲು ಬಂದಾಗ ಆ ಸಮಯದಲ್ಲಿ ನಾನು ಸಹ ನನ್ನ ಕಚೇರಿಯಲ್ಲಿ ಇದ್ದೇನು. ಸಾಕ್ಷಿಗೆ ನಿ.ಪಿ–4 ಪೋಟೋ ತೋರಿಸಲಾಗಿ ಸದರಿ ಪೋಟೋ ನೋಡಿ ಆ ಪೋಟೋದಲ್ಲಿ ತಾನು ಇರುವದಾಗಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ಸಾಕ್ಷಿದಾರರ ಕಛೇರಿಯ ಮುಂದೆ ತೆಗೆದಿರುತ್ತಾರೆ ಎಂದು

ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿರುತ್ತದೆ.

3) ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿ, ಸದರಿ ಕಚ್ಚಾ ನಕಾಶೆಯಲ್ಲಿ ತಮ್ಮ ಸಹಿ ಇರುವದಾಗಿ ಸಾಕ್ಷಿಯ ಒಪ್ಪಿದ್ದರಿಂದ ಅದನ್ನು ನಿ.ಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-5(ಎ) ಎಂದು ಗುರುತಿಸಲಾಯಿತು. ನಿ.ಪಿ-3 ಮತ್ತು 4 ದಾಖಲಾತಿಗಳನ್ನು ನನ್ನ ಸಮಕ್ಷಮ ತಯಾರಿಸಿದ ಸಮಯದಲ್ಲಿ ನಿ.ಪಿ-5 ಕಚ್ಚಾ ನಕಾಶೆಯನ್ನು ಘಟನಾ ಸ್ಥಳದಲ್ಲಿ ತಯಾರಿಸಲಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ.ಸಿ.ಎಂ.ಎಸ್ ವಕೀಲರಿಂದಃ 5 ಮತ್ತು 6 ನೇ ಆರೋಪಿತರ ಪರವಾಗಿಃ**

4) ನಿ.ಪಿ-3 ಘಟನಾ ಸ್ಥಳದ ಪಂಚನಾಮೆಯನ್ನು ಪೊಲೀಸರು ನಾನು ಕೆಲಸ ಮಾಡುವ ದಾನೇಶ್ವರಿ ನಗರದ 4 ನೇ ಕ್ರಾಸನಲ್ಲಿರುವ ಬೀಜ ಪ್ರಮಾಣೀಕರಣ ಸಂಸ್ಥೆಯಲ್ಲಿ ನಾನು ಕೆಲಸ ಮಾಡುವಾಗ ಸದರಿ ನಿ.ಪಿ-3 ಘಟನಾ ಸ್ಥಳದ ಪಂಚನಾಮೆಯನ್ನು ಬರೆದಿರುತ್ತಾರೆ. ನನಗೆ ನಿ.ಪಿ-3 ಘಟನಾ ಸ್ಥಳದ ಪಂಚನಾಮೆಗೆ ಸಾಕ್ಷಿದಾರರಾಗಿ ಬರಲು ಯಾವ ಪೊಲೀಸರು ಕರೆದಿರುತ್ತಾರೆ ಎಂದು ನನಗೆ ಆ ಪೊಲೀಸರ ಹೆಸರು ಹೇಳಲು ಬರುವದಿಲ್ಲ. ದಿನಾಂಕಃ 03.08.2019 ರಂದು 03 ನೇ ತಾರೀಖು ಯಾವ ದಿನ ಇತ್ತು ಎಂದು ನನಗೆ ಗೊತ್ತಿರುವದಿಲ್ಲ.

5) ಪೊಲೀಸರು ನನಗೆ ನಿ.ಪಿ-3 ಘಟನಾ ಸ್ಥಳದ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಮಾಡಲು ಯಾವ ಕ್ರೈಂ ನಂಬರನಲ್ಲಿ ಆದಂತಹ ಪ್ರಕರಣಕ್ಕೆ ಸಂಬಂದಪಟ್ಟಂತೆ ಕರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ಪೊಲೀಸರು ನನ್ನ ಕಚೇರಿಯ ಒಳಗಡೆಗೆ ಬಂದು ಸಾಕ್ಷಿಯಾಗಿ ಸಹಿ ಮಾಡಲು ಕರೆದಾಗ ನಾನು ಸಾಕ್ಷಿಯಾಗಿ ಸಹಿ ಮಾಡಲು ಒಪ್ಪಿ ನಾನು ಘಟನಾ ಸ್ಥಳದ ಪಂಚನಾಮೆಗೆ ಪೊಲೀಸರು ಹೇಳಿದ ಹಾಗೇ ಕೇವಲ ಸಹಿ ಮಾತ್ರ ಮಾಡಿದ್ದೇನೆ.

**ಪಾಟೀ ಸವಾಲುಃ ಶ್ರೀ.ಸಿ.ಎಂ.ಎಸ್ ವಕೀಲರು ಆರೋಪಿಗಳಾದಂತಹ 5 ಮತ್ತು 6 ಪರ ಮಾಡಿದ ಪಾಟೀ ಸವಾಲನ್ನು ಆರೋಪಿ 1,2,4 ನೇದವರ ಪರ ವಕೀಲರು ಸಹ ಸದರಿ ಪಾಟೀ ಸವಾಲನ್ನು ಅನುಮೋದಿಸಿಕೊಳ್ಳುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.